ದಿನಾಂಕಃ 07-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ವಾದಿ ಪರ ವಕೀಲರಿಂದ,

1) ನಾನು ನಿಶಾನೆ ಡಿ-59 ರಿಂದ 62 ದಾಖಲಾತಿಗಳನ್ನು ಹೊರತುಪಡಿಸಿ ಇತರೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಶಾನೆ ಡಿ-61 ಮತ್ತು 62 ದಾಖಲೆಯಲ್ಲಿ ನಮೂದಾಗಿರುವ ಹೇಮಾವತಿ ರವರು ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದು ಎಂದು ತಿಳಿಸಿದ್ದು, ಸದರಿ ಹಕ್ಕು ಖುಲಾಸೆ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನಿಶಾನೆ ಡಿ-61 ಮತ್ತು 62 ಕ್ರಯ ಪತ್ರಗಳನ್ನು ವಕೀಲರು ತಯಾರು ಮಾಡಿರುತ್ತಾರೆ.

2) ಕರಾರು ಪತ್ರ ಆಗುವ ಕಾಲಕ್ಕೆ ಮುಗಂಡ ಹಣವನ್ನು ಪಾವತಿ ಮಾಡಿರುವ ಕಾರಣ ನಿಶಾನೆ ಡಿ-61 ಮತ್ತು 62 ರಲ್ಲಿ ಮಾರುಕಟ್ಟೆಯ ಮೌಲ್ಯ ವ್ಯತ್ಯಾಸ ಇರುತ್ತದೆ. ಸದರಿ ವಸ್ತು ವಿಷಯವನ್ನು ಲಿಖಿತ ತಕರಾರಿನಲ್ಲಿ ತಿಳಿಸಿರುವುದಿಲ್ಲ. ಅಸಲು ದಾವೆ ಸಂಖ್ಯೆ 547/2017 ದಾವೆಯ ಬಗ್ಗೆ ನನಗೆ ಮಾಹಿತಿ ಇತ್ತು. ಸದರಿ ದಾವೆ ಇತ್ಯರ್ಥ ಆದ ನಂತರ ಕ್ರಯ ಪತ್ರ ಆಗಿರುತ್ತದೆ. ಸದರಿ ದಾವೆಯ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಇರುವ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ವಾದಿಗಳು ಯಾರು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ನಾನು ದಾವಾಸ್ವತ್ತುಗಳನ್ನು ಸದ್ಭಾವನೆಯಿಂದ ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳ ಸಂಬಂಧಿಕರ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ.

3) ನಾರಾಯಣಚಾರಿ ರವರಿಗೆ ಎಷ್ಟು ಜನ ಮಕ್ಕಳು ಎಂದು ವಿಚಾರಣೆ ಮಾಡಿದ ನಂತರ ನಾವು ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೇವೆ. ವಾದಿಗಳಿಗೆ ಮೋಸ

ಮಾಡಬೇಕೆಂಬ ಉದ್ದೇಶದಿಂದ ನಿಶಾನೆ ಡಿ–61 ಮತ್ತು 62 ಕ್ರಯ ಪತ್ರಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ಕ್ರಯ ಪತ್ರಗಳ ಸಾಕ್ಷಿದಾರರು ಮತ್ತು ಪ್ರತಿವಾದಿ 2 ರಿಂದ 19 ರವರು ಸೇರಿ ಕ್ರಯ ಪತ್ರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳ ಮೇಲೆ ಹಕ್ಕು ವೈಗರೆ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ